# ಮಗು ಮಂಕಾಗಿದೆಯೇ? ಆಟಿಸಂ ಇರಬಹುದು!

ಮಕ್ಕಳ ಬುದ್ಧಿವಿಕಾಸಕ್ಕೆ ಧಕ್ಕೆಯಾಗುವ ನರಸಂಬಂಧಿ ಕಾಯಿಲೆ 'ಆಟಿಸಂ', ಮಕ್ಕಳ ಬೌದ್ಧಿಕ, ಸಾಮಾಜಿಕ, ಬೆಳವಣಿಗೆಯನ್ನು ಕುಂಠಿತವಾಗುವಂತೆ ಮಾಡುತ್ತದೆ. ಇತ್ತೀಚಿನ ಸಂಶೋಧನೆ ಪ್ರಕಾರ ಪ್ರತಿ 68 ಮಕ್ಕಳಲ್ಲಿ ಒಂದು ಮಗುವಿಗೆ ಆಟಿಸಂ ತೊಂದರೆ ಇರುವುದು ಪತ್ತೆಯಾಗಿದೆ. ಇದಕ್ಕೆ ಪರಿಹಾರವೇನು? ಮಕ್ಕಳ ಮನೋವಿಕಾಸಕ್ಕೆ ಸವಾಲಾಗುವ ಈ ಸಮಸ್ಯೆ ನಿವಾರಣೆ ಹೇಗೆ?



**ಡಾ. ಸಹನಾ ಡಿ.**

ಐದು ವರ್ಷದ ಪುಟಾಣಿ ವೈಶಾಲಿ ನೋಡಲು ತುಂಬ ಮುದ್ದು. ಆದರೆ ಇವಳದೇ ವಯಸ್ಸಿನ ಮಕ್ಕಳಿಗೆ ಹೋಲಿಸಿದರೆ ಬುದ್ಧಿ ಮಾತ್ರ ಕೊಂಚ ಮಂಕು. ತಿನ್ನಲು ಆಸಕ್ತಿ ಇಲ್ಲ, ಆಡಲು ಇಷ್ಟವಿಲ್ಲ ಅಷ್ಟೇ ಏಕೆ, ಬೇರೆಯವರೊಂದಿಗೆ ಬೆರೆಯಲೂ ಒಲ್ಲೆ ಎನ್ನುವ ಸ್ವಭಾವ. ಹೆತ್ತವರಿಗೆ ಈಕೆಯ ನಡವಳಿಕೆಯೇ ವಿಚಿತ್ರವಾಗಿ ಕಾಣಲಾರಂಭಿಸಿದ್ದಲ್ಲದೆ ಮಗುವಿನ ಬುದ್ಧಿಮತ್ತೆಯೂ ಸಮಸ್ಯಾತ್ಮಕವಾಗಿರುವುದು ಚಿಂತೆಗೆ ಕಾರಣವಾಗಿತ್ತು. ವೈದ್ಯರ ಸಲಹೆಯಂತೆ ಮನೋ ಹಾಗೂ ನರರೋಗ ತಜ್ಞರನ್ನು ಭೇಟಿಯಾದಾಗ ವೈಶಾಲಿಯಲ್ಲಿ ಆಟಿಸಂ ಸಮಸ್ಯೆ ಇರುವುದು ಪತ್ತೆಯಾಯಿತು.

ಆಟಿಸಂ ಅಥವಾ ಆಟಿಸ್ಟಿಕ್ ಸ್ಪೆಕ್ಟ್ರಮ್ ಡಿಸಾರ್ಡರ್ (ASD) ಎಂಬುದು ಮಕ್ಕಳಲ್ಲಿ ಕಂಡುಬರುವ ಒಂದು ನರ ವಿಕಾಸದ ಅಸಾಮಾನ್ಯತೆ. ನರಮಂಡಲದ ಬೆಳವಣಿಗೆಯಲ್ಲಿ ನ್ಯೂನತೆ ಉಂಟಾಗುವುದರಿಂದ ಈ ಸಮಸ್ಯೆ ಬರುತ್ತದೆ. ಸಾಮಾನ್ಯವಾಗಿ ಮಕ್ಕಳ ಸಾಮಾಜಿಕ ನಡವಳಿಕೆ, ಸಂವಹನ ಕೌಶಲ್ಯ, ಬುದ್ಧಿಮತ್ತೆ ಮತ್ತು ಪುನರಾವರ್ತನೆಗಳ ಮೇಲೆ ಪರಿಣಾಮ ಬೀರುತ್ತದೆ. ಮಗು ನಡವಳಿಕೆಯಲ್ಲಿ ಅಸಹಜ ಮತ್ತು ವಿಭಿನ್ನ ಲಕ್ಷಣಗಳನ್ನು ತೋರಿಸಲಾರಂಭಿಸಿದರೆ ಸೂಕ್ತ ಚಿಕಿತ್ಸೆ ನೀಡಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ, ಆಟಿಸಂ ಸಮಸ್ಯೆ ಪ್ರತಿ 68 ಮಕ್ಕಳಲ್ಲಿ ಒಬ್ಬರಿಗೆ ಕಂಡುಬರುತ್ತದೆ. ಇದು ಒಂದು 'ಸ್ಪೆಕ್ಟ್ರಮ್' ಆಗಿರುವುದರಿಂದ, ಇದರ ಲಕ್ಷಣಗಳು ಒಂದು ಮಗುವಿನಲ್ಲಿರುವ ಲಕ್ಷಣಕ್ಕಿಂತ ಇನ್ನೊಂದು ಮಗುವಿನಲ್ಲಿ ವಿಭಿನ್ನವಾಗಿ ಕಾಣಿಸಿಕೊಳ್ಳುತ್ತದೆ.

ಮಕ್ಕಳಲ್ಲಿ ವಿವಿಧ ತೊಂದರೆಗಳು, ಮೆದುಳಿಗೆ ಆಗುವ ಪೆಟ್ಟು ಮುಂತಾದವುಗಳಿಂದ ನರರೋಗ ಸಮಸ್ಯೆ ಬರುತ್ತದೆ. ಇದರಿಂದ ಮಕ್ಕಳಿಗೆ ಸಾಮಾಜಿಕವಾಗಿ ಒಂದು ರೀತಿಯ 'ಭಯ' ಉಂಟಾಗುತ್ತದೆ. ಇಂತಹ ಮಕ್ಕಳು ಸಹಜವಾಗಿರುವ ಇತರ ಮಕ್ಕಳೊಂದಿಗೆ ಬೆರೆಯುವಲ್ಲಿ, ಸಂವಹನ ಮಾಡುವಲ್ಲಿ ಅಸಮರ್ಥರಾಗಿರುತ್ತಾರೆ. ಏಕಾಗ್ರತೆ ಕೊರತೆ, ದೃಷ್ಟಿಯಲ್ಲಿ ಮಂದ, ಮಾತನಾಡಲು ಸಾಧ್ಯವಾಗದೇ ಇರುವಂತಹ ತೊಂದರೆಗಳನ್ನೂ ಎದುರಿಸುತ್ತಾರೆ.

ಆಟಿಸಂ ಸಮಸ್ಯೆಗೆ ಇಂಥದ್ದೇ ಕಾರಣಗಳು ಎಂದು ನಿಖರವಾಗಿ ಹೇಳಲಾಗದು. ಇದು ಆನುವಂಶಿಕವಾಗಿಯೂ